# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-I)ಕ್ಕೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-1)ಸರ್ಕಾರದ ಆದೇಶ ಸಂಖ್ಯೆ:ನಅಇ 04 ಬೆರೂಪ್ರಾ 2007 ದಿನಾಂಕ:11.01.2007.

2) ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ದಾವಣಗೆರೆ ಇವರ ಪತ್ರ ಸಂ:ದಾನಪ್ರಾ:ಯೋವಿ:ಅಮುಂಯೋ: 107:2007-08:3277 ದಿ.06.03.2008

3) ದಿನಾಂಕ 24.06.2008 ರಂದು ಕಡತ ಸಂಖ್ಯೆ: ನಂಯೋ (12):ಉನಿ(ಕೆ.ಕಾ):ದಾ:ಹಮುಂಯೋ:ಅಂತಿಮ:230:08-09 ರಲ್ಲಿ ನಗರ ಯೋಜನಾ ನಿರ್ದೇಶಕರು ನೀಡಿರುವ ಅಭಿಪ್ರಾಯ.

*****

**ಪ್ರಸ್ತಾವನೆ:**

ಮೇಲೆ (1)ರ ಸರ್ಕಾರದ ಆದೇಶದಲ್ಲಿ ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-I)ಕ್ಕೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 13(1)ರನ್ವಯ ಅಗತ್ಯ ಕ್ರಮ ಜರುಗಿಸಿ, ಮಹಾಯೋಜನೆ (ಪರಿಷ್ಕೃತ-I)ಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ, ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಶಿಫಾರಸ್ಸಿನೊಂದಿಗೆ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರ ನಗರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ದಾವಣಗೆರೆ ನಗರ ಜನಸಂಖ್ಯೆಯು 2021 ನೇ ಇಸವಿಗೆ 6.75 ಲಕ್ಷಗಳಷ್ಟು ಬೆಳವಣಿಗೆ ಆಗಬಹುದೆಂದು ಅಂದಾಜಿಸಿ, ಮಹಾ ಯೋಜನೆಯನ್ನು ತಯಾರಿಸಲಾಗಿದೆ. ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶದ 25007 ಹೆಕ್ಟೇರ್ ಪ್ರದೇಶದಲ್ಲಿ 6229.78 ಹೆಕ್ಟೇರ್ ಪ್ರದೇಶವನ್ನು ದಾವಣಗೇರೆ ನಗರದ ನಗರೀಕರಣದ ಎಲ್ಲೆಯೆಂದು ಹಾಗೂ2099.81 ಹೆಕ್ಟೇರ್ ಪ್ರದೇಶವನ್ನು ನಗರೀಕರಣ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ, ದಾವಣಗೆರೆ ನಗರದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ 6229.78 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 2808.01 ಹೆಕ್ಟೇರ್ (ಶೇ.45.07) ವಾಣಿಜ್ಯಕ್ಕಾಗಿ 292.70

ಹೆಕ್ಟೇರ್ (ಶೇ.4.79), ಕೈಗಾರಿಕೆಗಾಗಿ 643.80 ಹೆಕ್ಟೇರ್ (ಶೇ.10.33), ಸಾರ್ವಜನಿಕ: ಅರೆಸಾರ್ವಜನಿಕ ಉಪಯೋಗಕ್ಕೆ 422.09 ಹೆಕ್ಟೇರ್ (ಶೇ.6.78), ಉದ್ಯಾನವನ:ಬಯಲು ಜಾಗಗಳಿಗೆ 539.73 ಹೆಕ್ಟೇರ್ (ಶೇ.8.66), ನಾಗರೀಕ ಸೌಲಭ್ಯಕ್ಕಾಗಿ 46.10 ಹೆಕ್ಟೇರ್ (ಶೇ.0.74) ಹಾಗೂ ಸಾರಿಗೆ ಮತ್ತು ಸಂಪರ್ಕಕ್ಕಾಗಿ 1310.44 ಹೆಕ್ಟೇರ್ (ಶೇ.21.04) ಮತ್ತು ಜಲಾವೃತ ಪ್ರದೇಶಕ್ಕಾಗಿ 166.91 ಹೆಕ್ಟೇರ್ (ಶೇ.2.68) ಪ್ರದೇಶವನ್ನು ನಿಗದಿಪಡಿಸಲಾಗಿದೆ.

ಹರಿಹರ ಪಟ್ಟಣದ ಜನಸಂಖ್ಯೆಯು 2021 ನೇ ಇಸವಿಗೆ 1.5 ಲಕ್ಷಗಳಷ್ಟು ಬೆಳವಣಿಗೆ ಆಗಬಹುದೆಂದು ಅಂದಾಜಿಸಿ ಮಹಾ ಯೋಜನೆಯನ್ನು ತಯಾರಿಸಲಾಗಿದೆ.ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶದ 25007 ಹೆಕ್ಟೇರ್ ಪ್ರದೇಶದಲ್ಲಿ 2099.81 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಹಾಗೂ2099.81 ಹೆಕ್ಟೇರ್ ಪ್ರದೇಶವನ್ನು ಹರಿಹರ ಪಟ್ಟಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ, ಹರಿಹರ ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ ಒಟ್ಟು 2099.81 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 1042.67 ಹೆಕ್ಟೇರ್, ವಾಣಿಜ್ಯಕ್ಕಾಗಿ 110.16 ಹೆಕ್ಟೇರ್, ಕೈಗಾರಿಕೆಗಾಗಿ 195.54 ಹೆಕ್ಟೇರ್, ಸಾರ್ವಜನಿಕ: ಅರೆಸಾರ್ವಜನಿಕ ಉಪಯೋಗಕ್ಕೆ 111.86 ಹೆಕ್ಟೇರ್, ಉದ್ಯಾನವನ:ಬಯಲು ಜಾಗಗಳಿಗೆ 216.67 ಹೆಕ್ಟೇರ್, ನಾಗರೀಕ ಸೌಲಭ್ಯಕ್ಕಾಗಿ 20.20 ಹೆಕ್ಟೇರ್ ಹಾಗೂ ಸಾರಿಗೆ ಮತ್ತು ಸಂಪರ್ಕಕ್ಕಾಗಿ 392.67 ಹೆಕ್ಟೇರ್ ಹಾಗೂ ಜಲಾವೃತ ಪ್ರದೇಶಕ್ಕಾಗಿ 10.04 ಹೆಕ್ಟೇರ್ ಪ್ರದೇಶವನ್ನು ನಿಗದಿಪಡಿಸಲಾಗಿದೆ. ಮಹಾಯೋಜನೆ (ಪರಿಷ್ಕೃತ-1) ಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(3)ರ ಪ್ರಕಾರ ಅಂತಿಮ ಅನುಮೋದನೆ ನೀಡಲು ಈ ಕೆಳಗಿನ ಷರತ್ತುಗಳೊಂದಿಗೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

1) ದಾವಣಗೆರೆ ನಗರದ ಮಹಾಯೋಜನೆಯ ಪ್ಲಾನಿಂಗ್ ಡಿಸ್ಟ್ರಿಕ್ಟ್-5ರಲ್ಲಿ ಕುಂದವಾಡ ಕೆರೆಗೆ ಲಗತ್ತಾಗಿ ಪ್ರಸ್ತಾಪಿಸಿರುವ ನಗರ ಮಟ್ಟದ ಉದ್ಯಾನವನ (City level Park) ಪ್ರದೇಶದ ಮಧ್ಯದಲ್ಲಿರುವ ಶಾಬನೂರು ಗ್ರಾಮದ ರಿ.ಸ.ನಂ.14 ರಿಂದ 20 ರವರೆಗಿನ ಜಮೀನುಗಳಲ್ಲಿ ಕಾಯ್ದಿರಿಸಿರುವ ವಸತಿ/ವಾಣಿಜ್ಯ ಉಪಯೋಗದ ವಿಸ್ತೀರ್ಣವನ್ನು ರಿ.ಸ.ನಂ.18,19,20 ನ್ನು ಸರ್ಕಾರವು ತಾತ್ಕಾಲಿಕ ಅನುಮೋದನೆ ನೀಡುವ ಸಂದರ್ಭದಲ್ಲಿ ವಿಧಿಸಿದ್ದ ಷರತ್ತಿನಂತೆ ನಗರ ಮಟ್ಟದ ಉದ್ಯಾನವನಕ್ಕಾಗಿ ಹಾಗೂ ಸರ್ವೆ ನಂ.14 ರಿಂದ 17 ರವರೆಗಿನ ಪ್ರದೇಶವನ್ನು ತಾತ್ಕಾಲಿಕ ಅನುಮೋದಿತ ಮಹಾ ಯೋಜನೆಯಂತೆ ನಗರ ಮಟ್ಟದ ಉದ್ಯಾನವನ ಉಪಯೋಗವೆಂದು ಪರಿಗಣಿಸತಕ್ಕದ್ದು. ಸಂಪೂರ್ಣವಾಗಿ ಯೋಜನಾ ತತ್ವದಡಿಯಲ್ಲಿ ಉದ್ಯಾನವನಕ್ಕಾಗಿಯೇ ಮೀಸಲಿಟ್ಟ ಉಪಯೋಗವೆಂದು ಪರಿಗಣಿಸತಕ್ಕದ್ದು.

2) ಕುಂದವಾಡ ಗ್ರಾಮದ ಸ.ನಂ.182 ರಲ್ಲಿ ಪ್ರಧಾನ ವಸತಿ ವಲಯದ ಮಧ್ಯಭಾಗದಲ್ಲಿ ಸಾರ್ವಜನಿಕ:ಅರೆ ಸಾರ್ವಜನಿಕ ಉಪಯೋಗಕ್ಕಾಗಿ ಗುರುತಿಸಿರುವ ತುಂಡು ಜಮೀನಿನ ಭೂ ಉಪಯೋಗವನ್ನು ವಾಸದ ಉಪಯೋಗ ಎಂದು ಪರಿಗಣಿಸತಕ್ಕದ್ದು.

3) ಕುಂದುವಾಡ ಗ್ರಾಮದ ಸ.ನಂ.21ರಲ್ಲಿ ಪ್ರಸ್ತಾಪಿಸಿರುವ ಭೂ ಉಪಯೋಗ ತಪ್ಪಾಗಿದ್ದು (Cartographical error), ಹಾಲಿ ಭೂ ಉಪಯೋಗ ನಕ್ಷೆಯನ್ವಯ ವಾಣಿಜ್ಯ ಉಪಯೋಗ ಎಂದು ಪರಿಗಣಿಸತಕ್ಕದ್ದು.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 81 ಬೆಂರೂಪ್ರಾ 2008**

**ಬೆಂಗಳೂರು ದಿನಾಂಕ:26.07.2008**

ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-I) ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಸರ್ಕಾರವು ಅಂತಿಮ ಅನುಮೋದನೆ ನೀಡಲಾಗಿದೆ.

1) ದಾವಣಗೆರೆ ನಗರದ ಮಹಾಯೋಜನೆಯ ಪ್ಲಾನಿಂಗ್ ಡಿಸ್ಟ್ರಿಕ್ಟ್-5ರಲ್ಲಿ ಕುಂದವಾಡ ಕೆರೆಗೆ ಲಗತ್ತಾಗಿ ಪ್ರಸ್ತಾಪಿಸಿರುವ ನಗರ ಮಟ್ಟದ ಉದ್ಯಾನವನ (City level Park) ಪ್ರದೇಶದ ಮಧ್ಯದಲ್ಲಿರುವ ಶಾಬನೂರು ಗ್ರಾಮದ ರಿ.ಸ.ನಂ.14 ರಿಂದ 20 ರವರೆಗಿನ ಜಮೀನುಗಳಲ್ಲಿ ಕಾಯ್ದಿರಿಸಿರುವ ವಸತಿ/ವಾಣಿಜ್ಯ ಉಪಯೋಗದ ವಿಸ್ತೀರ್ಣವನ್ನು ರಿ.ಸ.ನಂ.18,19,20 ನ್ನು ಸರ್ಕಾರವು ತಾತ್ಕಾಲಿಕ ಅನುಮೋದನೆ ನೀಡುವ ಸಂದರ್ಭದಲ್ಲಿ ವಿಧಿಸಿದ್ದ ಷರತ್ತಿನಂತೆ ನಗರ ಮಟ್ಟದ ಉದ್ಯಾನವನಕ್ಕಾಗಿ ಹಾಗೂ ಸರ್ವೆ ನಂ.14 ರಿಂದ 17 ರವರೆಗಿನ ಪ್ರದೇಶವನ್ನು ತಾತ್ಕಾಲಿಕ ಅನುಮೋದಿತ ಮಹಾ ಯೋಜನೆಯಂತೆ ನಗರ ಮಟ್ಟದ ಉದ್ಯಾನವನ ಉಪಯೋಗವೆಂದು ಪರಿಗಣಿಸತಕ್ಕದ್ದು. ಸಂಪೂರ್ಣವಾಗಿ ಯೋಜನಾ ತತ್ವದಡಿಯಲ್ಲಿ ಉದ್ಯಾನವನಕ್ಕಾಗಿಯೇ ಮೀಸಲಿಟ್ಟ ಉಪಯೋಗವೆಂದು ಪರಿಗಣಿಸತಕ್ಕದ್ದು.

2) ಕುಂದವಾಡ ಗ್ರಾಮದ ಸ.ನಂ.182 ರಲ್ಲಿ ಪ್ರಧಾನ ವಸತಿ ವಲಯದ ಮಧ್ಯಭಾಗದಲ್ಲಿ ಸಾರ್ವಜನಿಕ:ಅರೆ ಸಾರ್ವಜನಿಕ ಉಪಯೋಗಕ್ಕಾಗಿ ಗುರುತಿಸಿರುವ ತುಂಡು ಜಮೀನಿನ ಭೂ ಉಪಯೋಗವನ್ನು ವಾಸದ ಉಪಯೋಗ ಎಂದು ಪರಿಗಣಿಸತಕ್ಕದ್ದು.

3) ಕುಂದುವಾಡ ಗ್ರಾಮದ ಸ.ನಂ.21ರಲ್ಲಿ ಪ್ರಸ್ತಾಪಿಸಿರುವ ಭೂ ಉಪಯೋಗ ತಪ್ಪಾಗಿದ್ದು (Cartographical error), ಖಾಲಿ ಭೂ ಉಪಯೋಗ ನಕ್ಷೆಯನ್ವಯ ವಾಣಿಜ್ಯ ಉಪಯೋಗ ಎಂದು ಪರಿಗಣಿಸತಕ್ಕದ್ದು.

ಮಹಾಯೋಜನೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಟಿ.ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ರವರಿಗೆ ಪ್ರಕಟಣೆಗಾಗಿ ಹಾಗೂ ಪ್ರಕಟಿಸಿದ 200 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲು ಕೋರಿದೆ.

ಇವರಿಗೆ:

1) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ
2) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
3) ನಗರ ಯೋಜನಾ ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ, ದಾವಣಗೆರೆ
4) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
5) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.